# ನವಿಲುಗನ್ನಡಿ

- ಮಾರ್ಚ್ ತಿಂಗಳ 'ಮಹಿಳಾ ಸಂಚಿಕೆ'ಯ ಮುಖಪುಟ ಆಕರ್ಷಕವಾಗಿತ್ತು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಹೆಚ್ಚಿನ ಅರ್ಥ ತುಂಬುವಂತೆ ಈ ಸಂಚಿಕೆಯ ಕತೆ, ಕವಿತೆಗಳು, ಬರಹಗಳು ಹಾಗೂ ಸಂದರ್ಶನ ಮೂಡಿಬಂದಿವೆ. ಸಂಚಿಕೆ ಸಂಗ್ರಹ ಯೋಗ್ಯವಾಗಿದೆ.

**ಸುಮನಾ, ಬೆಂಗಳೂರು**

- ಎಂ.ಎಸ್. ಆಶಾದೇವಿಯವರ ಹೆಣ್ಣಿನ ಆತ್ಮಕಥನಗಳ ಕುರಿತ ಬರಹ 'ಸಾವಿರ ಮುಳ್ಳಿರಲಿ, ಒಂದಾರೆ ಅರಳಿದ ಹೂವಿರಲಿ'ದಲ್ಲಿನ ಹೆಣ್ಣುಮಕ್ಕಳ ಕಷ್ಟಗಳನ್ನು ಕಂಡು ಕಂಬನಿ ಮಿಡಿದೆ. ಮಿತ್ರಾ ವೆಂಕಟ್ರಾಜ್ ಅವರ 'ಮಲ್ಲಿಗೆ ಮಾಲೆಯ ಕಾರು' ನಮ್ಮ ಕಣ್ಣೆದುರೇ ನಡೆದ ಕತೆ ಎನಿಸುವಷ್ಟು ಆಪ್ತವಾಗಿದೆ.

**ಸಾವಿತ್ರಿ ಶ್ಯಾನುಭಾಗ್, ಕುಂದಾಪುರ**

- 'ಸ್ತ್ರೀವಾದ: ಕಣ್ಕಟ್ಟುಗಳ ಕಳಚಿಕೊಳ್ಳುವ ಹಾದಿಯಲ್ಲಿ...' ಲೇಖಕಿ ಎಚ್.ಎಸ್. ಶ್ರೀಮತಿಯವರ ಅಭಿಪ್ರಾಯಗಳನ್ನು ಸಂದರ್ಶಕಿ ಹೇಮಾ ಎಸ್. ಬಹಳ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ನನ್ನ ತಲೆಯನ್ನು ಅನೇಕ ಬಾರಿ ಕೊರೆಯುತ್ತಿದ್ದ ಸಮಸ್ಯೆಗಳು ಈ ಸಂದರ್ಶನವನ್ನು ಓದಿದ ನಂತರ ಪರಿಹಾರಗೊಂಡವು.

**ಬಿ.ಕೆ. ಮೀನಾಕ್ಷಿ, ಮೈಸೂರು**

- ಕಾವ್ಯಾ ಕಡಮೆ ಅವರ 'ಕಾಣಬಾರದು ಮರದ ಬೇರು' ಪ್ರಬಂಧ ಸಂಯಮದ ಪ್ರಬುದ್ಧ ಬರವಣಿಗೆ. ಅವರು ನ್ಯೂಜರ್ಸಿಯ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಲೇ ಬೇರೆ ಬೇರೆ ದೇಶಗಳ ಜನರ ಜೀವನ ಚಿತ್ರವನ್ನು ಸೂಕ್ಷ್ಮವಾಗಿ ಬಿಡಿಸಿಡುತ್ತಾರೆ.

**ಕೇಶವ ಕುಲಕರ್ಣಿ, ಇಂಗ್ಲೆಂಡ್**




- ಜಯಶ್ರೀ ಕಾಸರವಳ್ಳಿ ಅವರ ಕತೆ 'ಅಂಗಳದಲ್ಲುರುಳಿದ ರಂಜೆ ಹೂವಿನ ಸುಗಂಧ ಅರಸುತ್ತಾ...' ಲೇಖಕಿಯ ಸೂಕ್ಷ್ಮ ಸಂವೇದನೆಗೆ, ಬರವಣಿಗೆಗೆ ಸಾಕ್ಷಿಯಾಗಿದೆ.

**ಕೆ.ವಿ. ಸೀತಾರಾಮ್, ಮಂಗಳೂರು**

- ಶೈಲಾ, ಬೆಂಗಳೂರು ಅವರ 'ಪೊರೆ ಕಳಚಿಕೊಂಡವಳು', ವಿನಯಾ ಒಕ್ಕುಂದ ಅವರ 'ವರ್ಕ್ ಫ್ರಂ ಹೋಮ್', ಡಾ. ಪ್ರೇಮಲತ ಬಿ. ಅವರ 'ಐದು ಬೆರಳುಗಳು' ಕತೆಗಳು ಒಂದಕ್ಕಿಂತ ಒಂದು ವಿಭಿನ್ನ ಕಥಾಹಂದರವನ್ನು ಹೊಂದಿರುವ ವಿಶಿಷ್ಟ ಕತೆಗಳಾಗಿವೆ.

**ಎಂ. ಚಿದಾನಂದ, ವಿಜಯಪುರ**

- 'ಅಡುಗೆಮನೆಯೆಂಬ ಅನುಭವ ಮಂಟಪ' ಪ್ರೀತಿ ನಾಗರಾಜ ಅವರ ಪ್ರಬಂಧ ಓದಿ ನಗೆಯುಕ್ಕಿತು. ತಿಳಿಹಾಸ್ಯದೊಂದಿಗೆ ಅಡುಗೆಮನೆಯ ಒಳಗುಟ್ಟುಗಳನ್ನು ಸೊಗಸಾಗಿ ಬಿಚ್ಚಿಟ್ಟಿದ್ದಾರೆ. ಪ್ರಬಂಧ ಓದುತ್ತಿದ್ದಂತೆ ನಮ್ಮ ಮನೆಯ ಗಂಡಸರೆಲ್ಲಾ ಸಾಲುಸಾಲಾಗಿ ಕಣ್ಣ ಮುಂದೆ ಹಾಯ್ದು ಹೋದಂತೆ ಅನಿಸಿತು.

**ಸುವರ್ಣಾ ಮಠ, ಧಾರವಾಡ**